# ಚೆಂದದ ಚಂದಾಳ



**ಚಿಗುರೆಲೆಗಳಿಂದ ಇಡೀ ಮರವನ್ನೇ ಕೆಂಪಾಗಿಸಿಕೊಂಡು ಬೇಸಿಗೆಯಲ್ಲಿ ಚಂದದಿಂದ ನಿಲ್ಲುವ ಚಂದಾಳ, ಆಕಾಶದೆಡೆ ಸಾಗುತ್ತಿರುವ ಆಕರ್ಷಕ ಕೆಂಪು ತೇರಿನಂತೆ ಕಾಣುತ್ತದೆ.**

**■ ವಿನು ಗಂಗೆ**

ಕಳೆದ ವರ್ಷ ಶಿವರಾತ್ರಿ ದಿನ ಮಧುಕೇಶ್ವರನ ದರ್ಶನ ಮಾಡಲು ಮನೆಯವರೆಲ್ಲರೂ ಬನವಾಸಿಗೆ ಹೊರಟೆವು. 'ಹುಟ್ಟಿದರೆ ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್' ಎಂಬ ಆದಿಕವಿ ಪಂಪನ ಸಾಲುಗಳು ಹೆಜ್ಜೆಹೆಜ್ಜೆಗೂ ನೆನಪಿಸುವಂತೆ ನಮ್ಮ ಸೊರಬದಿಂದ ಬನವಾಸಿಗೆ ಹೋಗುವ ದಾರಿಯೂ ಇತ್ತು.

ಅಂದು ಶಿವರಾತ್ರಿಯಾದ್ದರಿಂದ ಮಧುಕೇಶ್ವರನನ್ನು ನೋಡಲು ಉದ್ದನೆ ಸರತಿ ಸಾಲಿತ್ತು. ಎಲ್ಲರೂ ಬಹಳ ಹೊತ್ತು ನಿಂತು ಉದ್ದ ಸಾಲು ಕ್ರಮಿಸಿ ಇನ್ನೇನು ಮಧುಕೇಶ್ವರನನ್ನು ನೋಡುವುದು ಎನ್ನುವಷ್ಟರಲ್ಲಿ ನಮ್ಮ ಜೊತೆ ಬಂದಿದ್ದ ತಂದೆಯವರಿಗೆ ಅನಾರೋಗ್ಯ ಉಂಟಾಯಿತು. ಅನಿವಾರ್ಯವಾಗಿ ವಾಪಸ್ಸು ಹೊರಟೆವು. ಬೇಸರದಿಂದ ಹಿಂದಿರುಗುತ್ತಿದ್ದ ನನ್ನಲ್ಲಿ, ಅಲ್ಲೇ, ರಸ್ತೆಯ ಇಕ್ಕೆಲದ ಕಾಡಿನಲ್ಲಿ ಕೆಂಪಗೆ ನಿಂತ ಮರಗಳು ಜಗ್ಗನೆ ಸಂಚಲನ ತಂದವು.

ಸಾಮಾನ್ಯವಾಗಿ ನಮ್ಮ ಊರಿನ ಕಡೆ ನಾನು ಕಾಣದ ಅಥವಾ ಕಂಡಿದ್ದರೂ ಬೇಸಿಗೆಯನ್ನು ಹೊರತುಪಡಿಸಿ ಇತರ ಕಾಲದಲ್ಲಿ ಸಾಮಾನ್ಯ ರೂಪಿನ ಈ ಮರ ನನ್ನ ಗಮನವನ್ನೆಂದೂ ಸೆಳೆದಿರಲಿಲ್ಲ. ಈಗ ನೋಡಿದರೆ ನಾನು ಕಂಡ ಮರಗಳಲ್ಲೇ ಅತ್ಯಂತ ಸ್ಫುರದ್ರೂಪಿ!

ಚಿಗುರಲ್ಲಿನ ಕೆಂಪು ಸಂಭ್ರಮ ನನ್ನಲ್ಲಿ ಮಧುಕೇಶ್ವರನ ದರ್ಶನ ಸಿಗದ ಬೇಸರವನ್ನು ಕ್ಷಣದಲ್ಲೇ ಮರೆಯಾಗಿಸಿ ಮೋಹಪರವಶಳನ್ನಾಗಿಸಿತು. ಹಂದರದ ಹರವು ಹೆಚ್ಚಾಗಿಲ್ಲದೇ ಎತ್ತರಕ್ಕೆ ನಿಂತ ಮರ ಮಧುಕೇಶ್ವರನನ್ನೇ ಹೊತ್ತು ನಿಂತ ಆಕರ್ಷಕ ಕೆಂಪು ತೇರಿನಂತೆ ಕಂಡಿತು. ನನ್ನ ಖುಷಿ ನೋಡಿ ನಮ್ಮ ತಂದೆಯವರ ಸ್ಥಿತಿ ಕೂಡ ಕೊಂಚ ಸುಧಾರಿಸಿತು. ನಂತರ ವಿಚಾರಿಸಲು, ಇದು ನಮ್ಮೂರಿನ ಕಡೆ ಕೆಂದಾಳ, ಚಂದಾಳ ಎಂದು ಕರೆಯುವ ಮರ ಎಂದು ತಿಳಿಯಿತು.

ಕೆಂದಾಳ, ಸಗಟೆ, ಸಾಗಡೆ ಅಥವಾ ಚಾಕೋಟೆ ಎಂದು ವಿವಿಧ ಭಾಗಗಳಲ್ಲಿ ಕರೆಯುವ ಈ ಮರದ ವೈಜ್ಞಾನಿಕ ಹೆಸರು **Schleichera oleosa.** ದೂರದಿಂದ ನೋಡಿದರೆ ಕೆಂಪು ಹೂಗಳೇನೋ ಎಂದು ಭ್ರಮಿಸುವಂತೆ, ತನ್ನ ಚಿಗುರೆಲೆಗಳಿಂದ ಇಡೀ ಮರವನ್ನೇ ಕೆಂಪಾಗಿಸಿಕೊಂಡು ಬೇಸಿಗೆಯಲ್ಲಿ ಚಂದದಿಂದ ನಿಲ್ಲುವ ಪರಿಯನ್ನು ನೋಡಿಯೇ ಅನುಭವಿಸಬೇಕು. ಮರ ಚಿಗುರುವ ಸಮಯದಲ್ಲೇ ಹೂಗಳೂ ಬಿಟ್ಟಿರುತ್ತವಾದರೂ ಕೆಂಪು ಎಲೆಗಳ ನಡುವೆ ಸಣ್ಣ ಹಳದಿ ಬಣ್ಣದ ಗೊಂಚಲುಗಳು ಕಣ್ಣಿಗೆ ಸುಲಭವಾಗಿ ಗೋಚರಿಸದು.

ಅತಿ ಗಡುಸಾದ ಕೆಂಪು ನಾಟಾ. ಇದರಿಂದ ಸಣ್ಣ ಗೊಂಬೆ ಮಾಡಿ ತೊಟ್ಟಿಲಲ್ಲಿ ಹಾಕಿ ಹೊಸ ಮದುಮಕ್ಕಳಿಗೆ ತೂಗಲು ಕೊಡುವುದು ನಮ್ಮ ಹಳ್ಳಿ ಕಡೆ ಸಂಪ್ರದಾಯ. ತಮ್ಮ ಜೀವನದ ಪ್ರತಿ ಹಂತದಲ್ಲೂ ಮರಗಳ ನಂಟನ್ನು ಬೆಸೆದುಕೊಂಡಿದ್ದ ನಮ್ಮ ಹಿರಿಯರು ಬಹುಶಃ ಚಂದಾಳದಂತೆ ಚೆಂದದ ಬಲಶಾಲಿ ಮಗು ಮುಂದೆ ಹುಟ್ಟಲಿ ಎಂಬುದರ ಸಾಂಕೇತಿಕವಾಗಿ ಚಂದಾಳದ ಗೊಂಬೆಯನ್ನು ತೊಟ್ಟಿಲಲ್ಲಿ ಇಟ್ಟು ತೂಗುವ ಸಂಪ್ರದಾಯ ಮಾಡಿರಬಹುದು.

ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ವಿಚಾರಿಸಿದಾಗ, ಇದರ ಸಸಿ ಅವರು ಬೆಳೆಸಿರಲಿಲ್ಲವಾದ ಕಾರಣ ಬೀಜಕ್ಕಾಗಿ ಶಿರಸಿಯ ಹಿರಿಯ ಸ್ನೇಹಿತರಾದ ರಮಾಕಾಂತ ಹೆಗ್ಗಡೆಯವರಲ್ಲಿ ಬೇಡಿಕೆ ಇಟ್ಟೆ. ಮರಗಿಡಗಳ ಉಳಿವಿಗಾಗಿ ಸಹೃದಯರಾಗಿ ಸ್ಪಂದಿಸುವ ಹೆಗ್ಗಡೆಯವರು ಎಂದಿನಂತೆ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಬೀಜವಾಗುವುದನ್ನು ಕಾಯ್ದು, ಮೂರು ತಿಂಗಳ ನಂತರ ಬಹಳಷ್ಟು ಬೀಜಗಳನ್ನು ಕಳುಹಿಸಿಕೊಟ್ಟರು. ಹಾಕಿದ ಬೀಜಗಳು ಇದುವರೆಗೆ ಮೊಳೆತಿಲ್ಲ. ಗಟ್ಟಿಯಾದ ಬೀಜಗಳು ಮೊಳೆಯುವುದು ತಡವಾಗುತ್ತದೆ ಎಂದು ಮಳೆಗಾಲದಲ್ಲಿ ಮತ್ತೆ ಬನವಾಸಿಯ ರಸ್ತೆಗೆ ಚನ್ನಬಸವ, ಕೇಶವರೊಡನೆ ಮಗಳನ್ನು ಕರೆದುಕೊಂಡು ಹೊರಟೆ.

ಅನೇಕ ಸಲ ಪುಟ್ಟ ಮಗಳನ್ನೆತ್ತಿಕೊಂಡು ಕಾಡಿನ ನಡುವೆ ಸಸಿ–ಬೀಜ ಹುಡುಕುವ ನನ್ನ ಪ್ರಯತ್ನ ಅನೇಕರಿಗೆ ಹಾಸ್ಯಾಸ್ಪದವಾಗಿ ಕಾಣಬಹುದಾದರೂ, ನನ್ನ ಎಲ್ಲ ಹುಡುಕಾಟಗಳಲ್ಲಿ ಕೈಜೋಡಿಸಿ ಕಾಡುಸಸಿಗಳನ್ನು ಗುರುತಿಸುವ ಕೇಶವನೂ, ಮುಳ್ಳು–ಪೊದೆ ಎಂದು ಎಣಿಸದೆ ಮುನ್ನುಗ್ಗಿ ಬೀಜ–ಸಸಿಗಳನ್ನು ತಂದು ಪಾಕೀಟಿಗೆ ಹಾಕಿ ಆರೈಕೆಯ ಪ್ರತಿ ಹಂತದಲ್ಲಿ ನೆರವಾಗುವ ಚನ್ನಬಸವನೂ ಒಮ್ಮೆಯೂ ಕೊಂಕು ನುಡಿಯದೆ ಮುತುವರ್ಜಿಯಿಂದ ಈ ಕೆಲಸ ಮಾಡುತ್ತಾರೆ. ಬಹುಶಃ ಈ ಮಟ್ಟದ ಬದ್ಧತೆ ಇವರಲ್ಲಿ ಇಲ್ಲವಾಗಿದ್ದಲ್ಲಿ ವಿರಳ ತಳಿಯ ಮರಗಳನ್ನು ಬೆಳೆಸುವ ನನ್ನ ಪ್ರಯತ್ನ ಹೆಚ್ಚಿನ ಫಲ ನೀಡುತ್ತಿರಲಿಲ್ಲ. ಇವರ ನೆರವಿನಿಂದ ಹುಡುಕಿ, ಬೇರಿನಿಂದ ಎದ್ದ ಕೆಲವು ಚಂದಾಳ ಸಸಿ ಕೀಳಿಸಿ ತಂದೆ.

ಕೆಲ ತಿಂಗಳುಗಳ ಹಿಂದೆ ಚಂದಾಳದ ಗೊಂಬೆಗಾಗಿ ಸೊರಬದ ಸಂತೆಯ ಇಂಚಿಂಚು ಹುಡುಕಿದೆವು. ಕೆಂಪು ಬಣ್ಣ ಬಳಿದ ಮರದ ಗೊಂಬೆಗಳನ್ನೇ 'ಚಂದಾಳದ ಗೊಂಬೆ' ಎಂದು ಮಾರುತ್ತಿದ್ದುದನ್ನು ಕಂಡೆವೇ ವಿನಃ ನಿಜವಾದ ಚಂದಾಳದ ಗೊಂಬೆ ಸಿಗಲಿಲ್ಲ. ಚಂದಾಳ ಮರದ ವಿರಳತೆ ಈ ಹಂತ ತಲುಪಿದೆ.

ಬನವಾಸಿಯ ರಸ್ತೆಯಿಂದ ಕೀಳಿಸಿ ತಂದ ಸಸಿಗಳಲ್ಲಿ ಮೂರು ಸಸಿಗಳು ಚಿಗುರಿವೆ. ಮೋಹಕ ಚಂದಾಳ ಚಿಗುರರಳಿಸಿ ಶಿವರಾತ್ರಿ ಸಮಯದಲ್ಲಿ ಮಧುಕೇಶ್ವರನ ತೇರು ಎಲ್ಲಾ ಕಡೆ ನಿಂತರೆ ಎಷ್ಟು ಚಂದ ಅಲ್ಲವೇ?

ಪ್ರತಿಕ್ರಿಯಿಸಿ: **feedback@sudha.co.in**